



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಅಲಿಫ್ ಲಾಮ್ ರಾ. ಓ ಮುಹಮ್ಮದರೇ, ಇದೊಂದು ಗ್ರಂಥ. ನೀವು ಜನರನ್ನು ಅವರ ಪ್ರಭುವಿನ ಅನುಜ್ಞೆಯಂತೆ ಅಂಧಕಾರಗಳಿಂದ ಹೊರತೆಗೆದು ಪ್ರಕಾಶದ ಕಡೆಗೆ ತರಲಿಕ್ಕಾಗಿ ನಾವು ಇದನ್ನು ನಿಮಗೆ ಅವತೀರ್ಣಗೊಳಿಸಿರುತ್ತೇವೆ. ಅವನು ಮಹಾ ಪ್ರತಾಪಿಯೂ ಸ್ವಯಂ ಸ್ತುತ್ಯರ್ಹನೂ ಆಗಿರುತ್ತಾನೆ.[1]

الٓرٰ ۚ كِتٰبٌ اَنْزَلْنٰهُ اِلَيْكَ لِتُخْرِجَ النَّاسَ مِنَ الظُّلُمٰتِ اِلَى النُّوْرِ ۙ بِاِذْنِ رَبِّهِمْ اِلٰى صِرَاطِ الْعَزِيْزِ الْحَمِيْدِ ①

2. ಮತ್ತು ಆಕಾಶಗಳ ಹಾಗೂ ಭೂಮಿಯ ಸಕಲ ಸೃಷ್ಟಿಗಳ ಮಾಲಕನಾಗಿರುತ್ತಾನೆ. ಸತ್ಯನಿಷೇಧಿಗಳಿಗೆ ಅತ್ಯಂತ ವಿನಾಶಕಾರಿ ಶಿಕ್ಷೆಯಿದೆ.

اللّٰهِ الَّذِيْ لَهٗ مَا فِي السَّمٰوٰتِ وَمَا فِي الْاَرْضِ ۗ وَوَيْلٌ لِّلْكٰفِرِيْنَ مِنْ عَذَابٍ شَدِيْدِ ②

3. ಅವರು ಐಹಿಕ ಜೀವನಕ್ಕೆ ಪಾರತ್ರಿಕ ಜೀವನಕ್ಕಿಂತ ಹೆಚ್ಚು ಮಹತ್ವ ನೀಡುತ್ತಾರೆ. ಅವರು ಜನರನ್ನು ಅಲ್ಲಾಹನ ಮಾರ್ಗದಿಂದ ತಡೆಯುತ್ತಾರೆ ಮತ್ತು ಈ ಮಾರ್ಗವು (ಅವರ ಇಚ್ಛೆಗಳ ಪ್ರಕಾರ) ವಕ್ರವಾಗಬೇಕೆಂದು ಬಯಸುತ್ತಾರೆ. ಇವರು ಪಥ ಭ್ರಷ್ಟತೆಯಲ್ಲಿ ಬಹುದೂರ ಸಾಗಿದ್ದಾರೆ.

الَّذِيْنَ يَسْتَحِبُّوْنَ الْحَيٰوةَ الدُّنْيَا عَلَى الْاٰخِرَةِ وَيَصُدُّوْنَ عَنْ سَبِيْلِ اللّٰهِ وَيَبْغُوْنَهَا عِوَجًا ؕ اُولٰٓئِكَ فِيْ ضَلٰلٍ بَعِيْدٍ ③

4. ನಾವು ನಮ್ಮ ಸಂದೇಶವನ್ನು ಸಾರಲಿಕ್ಕಾಗಿ ರವಾನಿಸಿದ ಪ್ರವಾದಿಗಳ ಪೈಕಿ ಪ್ರತಿಯೊಬ್ಬನೂ ತನ್ನ ಜನಾಂಗದವರಿಗೆ ಚೆನ್ನಾಗಿ ವಿವರಿಸಿ ಕೊಡಲಿಕ್ಕಾಗಿ ಅವರ ಭಾಷೆಯಲ್ಲೇ ಸಂದೇಶ ಕೊಟ್ಟಿರುತ್ತಾನೆ. ಮುಂದೆ ಅಲ್ಲಾಹನು ತನಗಿಷ್ಟ ಬಂದವರನ್ನು ಪಥಭ್ರಷ್ಟಗೊಳಿಸುತ್ತಾನೆ ಮತ್ತು ತನಗಿಷ್ಟ ಬಂದವರಿಗೆ ಸನ್ಮಾರ್ಗದರ್ಶನ ನೀಡುತ್ತಾನೆ. ಅವನು ಮಹಾ ಪ್ರತಾಪಶಾಲಿಯೂ ಧೀಮಂತನೂ ಆಗಿರುತ್ತಾನೆ.

وَمَآ اَرْسَلْنَا مِنْ رَّسُوْلٍ اِلَّا بِلِسَانِ قَوْمِهٖ لِيُبَيِّنَ لَهُمْ ؕ فَيُضِلُّ اللّٰهُ مَنْ يَّشَآءُ وَيَهْدِيْ مَنْ يَّشَآءُ ؕ وَهُوَ الْعَزِيْزُ الْحَكِيْمُ ④

1. ಹಮೀದ್(ಸ್ತುತ್ಯರ್ಹ) ಎಂಬ ಪದವು 'ಮಹ್ಮೂದ್' ಎಂಬ ಪದದ ಅರ್ಥವನ್ನೇ ಹೊಂದಿದೆ. ಆದರೆ ಅವೆರಡರ ನಡುವೆ ಸೂಕ್ಷ್ಮವಾದ ಒಂದು ವ್ಯತ್ಯಾಸವಿದೆ. ಒಬ್ಬ ವ್ಯಕ್ತಿಯನ್ನು ಪ್ರಶಂಸಿಸಲಾಗಿದ್ದರೆ ಅಥವಾ ಪ್ರಶಂಸಿಸಲ್ಪಡುತ್ತಿದ್ದರೆ ಅವನನ್ನು 'ಮಹ್ಮೂದ್' ಎನ್ನಲಾಗುತ್ತದೆ. ಆದರೆ 'ಹಮೀದ್' ಎಂದರೆ ಸ್ವಯಮೇವ ಸ್ತುತ್ಯರ್ಹನೆಂದು ಅರ್ಥ. ಅವನನ್ನು ಯಾರಾದರೂ ಸ್ತುತಿಸುತ್ತಿದ್ದರೂ ಇಲ್ಲದಿದ್ದರೂ ಸರಿಯೇ.

5. ನಾವು ಇದಕ್ಕಿಂತ ಮುಂಚೆ ಮೂಸಾರನ್ನು ನಮ್ಮ ನಿದರ್ಶನಗಳೊಂದಿಗೆ ರವಾನಿಸಿದ್ದೆವು. ನಿಮ್ಮ ಜನಾಂಗವನ್ನು ಅಂಧಕಾರಗಳಿಂದ ಹೊರತೆಗೆದು ಪ್ರಕಾಶಕ್ಕೆ ತರಬೇಕೆಂದೂ ಅವರಿಗೆ 'ಅಯ್ಯಾಮಿಲ್ಲಾಹ್'[2] (ದಿವ್ಯದಿನ)ಗಳ ಬೋಧಪ್ರದ ಘಟನೆಗಳನ್ನು ಹೇಳಿ ತಿಳಿಸಿ ಉಪದೇಶಿಸ ಬೇಕೆಂದೂ ನಾವು ಅವರಿಗೂ ಅಪ್ಪಣೆ ಕೊಟ್ಟಿದ್ದೆವು. ಈ ಘಟನೆಗಳಲ್ಲಿ ನಿಶ್ಚಯವಾಗಿಯೂ ಪ್ರತಿಯೊಬ್ಬ ಸಹನಶೀಲನಿಗೂ ಕೃತಜ್ಞನಿಗೂ[3] ದೊಡ್ಡ ನಿದರ್ಶನಗಳಿವೆ.

وَلَقَدْ أَرْسَلْنَا مُوسَىٰ بِآيَاتِنَا أَنْ أَخْرِجْ
قَوْمَكَ مِنَ الظُّلُمَاتِ إِلَى النُّورِ
وَذَكِّرْهُم بِأَيَّامِ اللَّهِ ۚ إِنَّ فِي ذَٰلِكَ لَآيَاتٍ
لِّكُلِّ صَبَّارٍ شَكُورٍ ٥

6. ಮೂಸಾ ತನ್ನ ಜನಾಂಗದೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ, "ಅಲ್ಲಾಹನು ನಿಮ್ಮ ಮೇಲೆ ಮಾಡಿದ ಉಪಕಾರವನ್ನು ಸ್ಮರಿಸಿರಿ. ಅವನು ನಿಮ್ಮನ್ನು ಫಿರ್‌ಔನನ ಜನಾಂಗದಿಂದ ಬಿಡಿಸಿದನು. ಅವರು ನಿಮಗೆ ಅತ್ಯಧಿಕ ಹಿಂಸೆ ಕೊಡುತ್ತಿದ್ದರು. ನಿಮ್ಮ ಗಂಡು ಮಕ್ಕಳನ್ನು ವಧಿಸಿ ಬಿಡುತ್ತಿದ್ದರು ಮತ್ತು ನಿಮ್ಮ ಹೆಣ್ಣು ಮಕ್ಕಳನ್ನು ಜೀವಂತ ಬಿಟ್ಟು ಬಿಡುತ್ತಿದ್ದರು. ಇದರಲ್ಲಿ ನಿಮ್ಮ ಪ್ರಭುವಿನ ಕಡೆಯಿಂದ ನಿಮ್ಮ ಪಾಲಿಗೆ ಮಹಾ ಪರೀಕ್ಷೆಯಿತ್ತು.

وَإِذْ قَالَ مُوسَىٰ لِقَوْمِهِ اذْكُرُوا نِعْمَةَ
اللَّهِ عَلَيْكُمْ إِذْ أَنجَاكُم مِّنْ آلِ فِرْعَوْنَ
يَسُومُونَكُمْ سُوءَ الْعَذَابِ وَيُذَبِّحُونَ
أَبْنَاءَكُمْ وَيَسْتَحْيُونَ نِسَاءَكُمْ ۚ وَفِي
ذَٰلِكُم بَلَاءٌ مِّن رَّبِّكُمْ عَظِيمٌ ٦

7. ನೀವು ಕೃತಜ್ಞರಾಗಿದ್ದರೆ ನಾನು ನಿಮಗೆ ಇನ್ನೂ ಹೆಚ್ಚು ಪ್ರದಾನ ಮಾಡುವೆನೆಂದೂ ನೀವು ಕೃತಘ್ನತೆ ತೋರಿದರೆ ನನ್ನ ಶಿಕ್ಷೆಯು ಅತ್ಯಂತ ಕಠಿಣವಾಗಿದೆಯೆಂದೂ ನಿಮ್ಮ ಪ್ರಭು ಎಚ್ಚರಿಕೆ ಕೊಟ್ಟಿದ್ದುದನ್ನೂ ಸ್ಮರಿಸಿರಿ."

وَإِذْ تَأَذَّنَ رَبُّكُمْ لَئِن شَكَرْتُمْ لَأَزِيدَنَّكُمْ
وَلَئِن كَفَرْتُمْ إِنَّ عَذَابِي لَشَدِيدٌ ٧

8. ಮತ್ತು ಮೂಸಾ ಹೇಳಿದರು: "ನೀವೂ ಭೂಮಿಯ ಮೇಲೆ ವಾಸಿಸುವವರೆಲ್ಲರೂ ಸತ್ಯನಿಷೇಧಿಗಳಾಗಿ ಬಿಟ್ಟರೂ ಅಲ್ಲಾಹನು ನಿರಪೇಕ್ಷನೂ ಸ್ವಯಂ ಸ್ತುತ್ಯರ್ಹನೂ ಆಗಿರುತ್ತಾನೆ."

وَقَالَ مُوسَىٰ إِن تَكْفُرُوا أَنتُمْ وَمَن فِي
الْأَرْضِ جَمِيعًا فَإِنَّ اللَّهَ لَغَنِيٌّ حَمِيدٌ ٨

9. ನಿಮಗಿಂತ[4] ಮುಂಚೆ ಗತಿಸಿ ಹೋದ ನೂಹರ ಜನಾಂಗ, ಆದ್, ಸಮೂದ್ ಮತ್ತು ಅಲ್ಲಾಹನ ಹೊರತು ಇನ್ನಾರ ಲೆಕ್ಕಕ್ಕೂ

أَلَمْ يَأْتِكُمْ نَبَأُ الَّذِينَ مِن
قَبْلِكُمْ قَوْمِ نُوحٍ وَعَادٍ وَثَمُودَ ۛ

2. 'ಅಯ್ಯಾಮ್' ಎಂಬ ಪದವನ್ನು ಅರಬಿಯಲ್ಲಿ ಸಾಮಾನ್ಯವಾಗಿ ಸ್ಮರಣಾರ್ಹ ಐತಿಹಾಸಿಕ ಘಟನೆಗಳಿಗೆ ಉಪಯೋಗಿಸಲಾಗುತ್ತದೆ. 'ಅಯ್ಯಾಮುಲ್ಲಾಹ್' ಎಂದರೆ ಅಲ್ಲಾಹನು ಗತಕಾಲದ ಜನಾಂಗಗಳು ಮತ್ತು ಮಹಾ ವ್ಯಕ್ತಿಗಳಿಗೆ ಅವರವರ ಕರ್ಮಕ್ಕನುಗುಣವಾಗಿ ಪ್ರತಿಫಲ ಅಥವಾ ಶಿಕ್ಷೆ ನೀಡಿದಂತಹ ಮಾನವೇತಿಹಾಸದ ಪ್ರಮುಖ ಅಧ್ಯಾಯಗಳಾಗಿವೆ.

3. ಅರ್ಥಾತ್- ದೃಷ್ಟಾಂತಗಳೇನೋ ಇವೆ. ಆದರೆ ಅಲ್ಲಾಹನ ಪರೀಕ್ಷೆಗಳ ವೇಳೆ ತಾಳ್ಮೆ ಮತ್ತು ಧೈರ್ಯದಿಂದಿರುವವರಿಗೆ ಹಾಗೂ ಅಲ್ಲಾಹನ ಅನುಗ್ರಹಗಳನ್ನು ಸರಿಯಾಗಿ ಅನುಭವಿಸಿ ಆ ಬಗ್ಗೆ ದೇವನನ್ನು ಸ್ತುತಿಸುವವರಿಗೆ ಮಾತ್ರ ಅದರಿಂದ ಪ್ರಯೋಜನ ಪಡೆಯುವುದು ಸಾಧ್ಯ.

4. ಹ. ಮೂಸಾರ(ಅ) ಭಾಷಣ ಪೂರ್ವೋಕ್ತ ವಿಷಯದೊಂದಿಗೆ ಸಮಾಪ್ತಿಗೊಂಡಿತು. ಇಲ್ಲಿಂದ ಮಕ್ಕಾದ ಸತ್ಯನಿಷೇಧಿಗಳೊಂದಿಗಿನ ನೇರ ಅಭಿಸಂಬೋಧನೆ ಆರಂಭಗೊಳ್ಳುತ್ತದೆ.

ಸಿಗದ ಅವರ ನಂತರದ ಹಲವಾರು ಜನಾಂಗಗಳ ಸಮಾಚಾರಗಳು ನಿಮಗೆ ತಲುಪಲಿಲ್ಲವೇ? ಅವರ ಸಂದೇಶವಾಹಕರು ಅವರ ಬಳಿಗೆ ಸುಸ್ಪಷ್ಟ ವಿಷಯಗಳನ್ನೂ ಸುವ್ಯಕ್ತ ನಿದರ್ಶನಗಳನ್ನೂ ತಂದಾಗ ಅವರು ತಮ್ಮ ಕೈಯನ್ನು ಬಾಯೊಳಗೆ ಒತ್ತಿಕೊಂಡು[5] (ಹೀಗೆ) ಹೇಳಿದರು- "ಯಾವ ಸಂದೇಶ ಸಹಿತ ನೀವು ಕಳುಹಿಸಲ್ಪಟ್ಟಿರುವಿರೋ ಅದನ್ನು ನಾವು ನಿರಾಕರಿಸುತ್ತೇವೆ ಮತ್ತು ನೀವು ನಮಗೆ ಯಾವುದರ ಕರೆ ನೀಡುತ್ತೀರೋ ಅದರ ಬಗ್ಗೆ ನಾವು ತೀವ್ರ ಚಿಂತಾಪೂರ್ಣ ಸಂಶಯಕ್ಕೊಳಗಾಗಿದ್ದೇವೆ."

وَ الَّذِيْنَ مِنْ بَعْدِهِمْ ۛؕ لَا يَعْلَمُهُمْ اِلَّا
اللّٰهُ ؕ جَآءَتْهُمْ رُسُلُهُمْ بِالْبَيِّنٰتِ فَرَدُّوْۤا
اَيْدِيَهُمْ فِيْۤ اَفْوَاهِهِمْ وَ قَالُوْۤا اِنَّا كَفَرْنَا
بِمَاۤ اُرْسِلْتُمْ بِهٖ وَ اِنَّا لَفِيْ شَكٍّ مِّمَّا
تَدْعُوْنَنَاۤ اِلَيْهِ مُرِيْبٍ ۝٩

10. ಅವರ ರಸೂಲರು ಹೇಳಿದರು- "ಆಕಾಶಗಳ ಮತ್ತು ಭೂಮಿಯ ಸೃಷ್ಟಿಕರ್ತನಾದ ಅಲ್ಲಾಹನ ಬಗ್ಗೆ ನಿಮಗೆ ಸಂಶಯವಿದೆಯೇ? ಅವನು ನಿಮ್ಮ ಅಪರಾಧಗಳನ್ನು ಕ್ಷಮಿಸಲಿಕ್ಕಾಗಿ ಮತ್ತು ನಿಮಗೆ ಒಂದು ನಿಶ್ಚಿತ ಅವಧಿಯ ತನಕ ಸಮಯಾವಕಾಶ ನೀಡಲಿಕ್ಕಾಗಿ ನಿಮ್ಮನ್ನು ಕರೆಯುತ್ತಿದ್ದಾನೆ." ಅವರು (ಹೀಗೆ) ಉತ್ತರಕೊಟ್ಟರು, "ನೀವು ನಮ್ಮ ಹಾಗಿರುವ ಮನುಷ್ಯರಲ್ಲದೆ ಇನ್ನೇನೂ ಅಲ್ಲ. ನಮ್ಮ ಪೂರ್ವಿಕರಿಂದಲೇ ಆರಾಧಿಸಲ್ಪಡುತ್ತಾ ಬಂದಿರುವವುಗಳ ದಾಸ್ಯ-ಆರಾಧನೆಯಿಂದ ನೀವು ನಮ್ಮನ್ನು ತಡೆಯಲಿಚ್ಛಿಸುತ್ತೀರಿ. ಹಾಗಿದ್ದರೆ ಸುವ್ಯಕ್ತ ಆಧಾರ ಪ್ರಮಾಣ ತನ್ನಿರಿ."

قَالَتْ رُسُلُهُمْ اَفِي اللّٰهِ شَكٌّ فَاطِرِ
السَّمٰوٰتِ وَ الْاَرْضِ ؕ يَدْعُوْكُمْ لِيَغْفِرَ
لَكُمْ مِّنْ ذُنُوْبِكُمْ وَ يُؤَخِّرَكُمْ اِلٰۤى اَجَلٍ
مُّسَمًّى ؕ قَالُوْۤا اِنْ اَنْتُمْ اِلَّا بَشَرٌ مِّثْلُنَا ؕ
تُرِيْدُوْنَ اَنْ تَصُدُّوْنَا عَمَّا كَانَ يَعْبُدُ
اٰبَآؤُنَا فَاْتُوْنَا بِسُلْطٰنٍ مُّبِيْنٍ ۝١٠

11. ಅವರ ರಸೂಲರು ಅವರೊಡನೆ ಹೇಳಿದರು; "ನಿಜಕ್ಕೂ ನಾವು ನಿಮ್ಮಂತಹ ಮನುಷ್ಯರೇ ವಿನಾ ಇನ್ನೇನೂ ಅಲ್ಲ. ಆದರೆ ಅಲ್ಲಾಹನು ತನ್ನ ದಾಸರ ಪೈಕಿ ತನಗಿಷ್ಟ ಬಂದವರನ್ನು ಅನುಗ್ರಹಿಸುತ್ತಾನೆ ಮತ್ತು ನಿಮಗೇನಾದರೂ ಆಧಾರ ಪ್ರಮಾಣ ತರುವುದು ನಮ್ಮ ಅಧಿಕಾರದಲ್ಲಿಲ್ಲ. ಆಧಾರ ಪ್ರಮಾಣ ಅಲ್ಲಾಹನ ಅನುಜ್ಞೆಯಿಂದಲೇ ಬರಬಲ್ಲುದು ಮತ್ತು ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆ ಇಡಬೇಕು.

قَالَتْ لَهُمْ رُسُلُهُمْ اِنْ نَّحْنُ اِلَّا بَشَرٌ
مِّثْلُكُمْ وَ لٰكِنَّ اللّٰهَ يَمُنُّ عَلٰى مَنْ يَّشَآءُ
مِنْ عِبَادِهٖ ؕ وَ مَا كَانَ لَنَاۤ اَنْ نَّاْتِيَكُمْ
بِسُلْطٰنٍ اِلَّا بِاِذْنِ اللّٰهِ ؕ وَ عَلَى اللّٰهِ
فَلْيَتَوَكَّلِ الْمُؤْمِنُوْنَ ۝١١

12. ನಮ್ಮ ಜೀವನ ಮಾರ್ಗಗಳಲ್ಲಿ ಅಲ್ಲಾಹನು ನಮಗೆ ಮಾರ್ಗದರ್ಶನ ಮಾಡಿರುವಾಗ ನಾವು ಅವನ ಮೇಲೆ ಏಕೆ ಭರವಸೆ ಇಡಬಾರದು. ನೀವು ನಮಗೆ ಕೊಡುವಂತಹ ಹಿಂಸೆಗಳನ್ನು ನಾವು ಸಹಿಸಿಕೊಳ್ಳುವೆವು. ಭರವಸೆಯಿಡುವವರ ಭರವಸೆಯು ಅಲ್ಲಾಹನ ಮೇಲೆಯೇ ಇರಬೇಕು.

وَ مَا لَنَاۤ اَلَّا نَتَوَكَّلَ عَلَى اللّٰهِ وَ قَدْ هَدٰىنَا
سُبُلَنَا ؕ وَ لَنَصْبِرَنَّ عَلٰى مَاۤ اٰذَيْتُمُوْنَا ؕ
وَ عَلَى اللّٰهِ فَلْيَتَوَكَّلِ الْمُتَوَكِّلُوْنَ ۝١٢ ع

5. ಇದು 'ಬೆರಳು ಕಚ್ಚಿಕೊಳ್ಳುವುದು' ಅಥವಾ 'ಕಿವಿಗೆ ಕೈ ಇಟ್ಟು ಕೊಳ್ಳುವುದು' ಮುಂತಾಗಿ ಹೇಳಲಾಗುವಂತಹ ಅರ್ಥವನ್ನೇ ಹೊಂದಿದೆ.

13. ಕೊನೆಗೆ ಸತ್ಯನಿಷೇಧಿಗಳು ತಮ್ಮ ಸಂದೇಶವಾಹಕರೊಡನೆ, "ನೀವು ನಮ್ಮ ಜಾತಿಗೆ ಮರಳಿ ಬರಬೇಕು[6] ಇಲ್ಲವೇ ನಾವು ನಿಮ್ಮನ್ನು ನಮ್ಮ ನಾಡಿನಿಂದ ಹೊರಕ್ಕಟ್ಟಿ ಬಿಡುವೆವು" ಎಂದರು. ಆಗ ಅವರ ಪ್ರಭು ಅವರ ಮೇಲೆ 'ದಿವ್ಯವಾಣಿ' ಕಳುಹಿಸಿದನು - "ನಾವು ಈ ಅಕ್ರಮಿಗಳನ್ನು ನಾಶಗೊಳಿಸುವೆವು-

وَقَالَ الَّذِينَ كَفَرُوا لِرُسُلِهِمْ لَنُخْرِجَنَّكُمْ
مِّنْ أَرْضِنَا أَوْ لَتَعُودُنَّ فِي مِلَّتِنَا ۖ
فَأَوْحَىٰ إِلَيْهِمْ رَبُّهُمْ لَنُهْلِكَنَّ الظَّالِمِينَ ﴿١٣﴾

14. ಮತ್ತು ಆ ಬಳಿಕ ನಿಮ್ಮನ್ನು ಭೂಮಿಯಲ್ಲಿ ನೆಲೆಗೊಳಿಸುವೆವು. ಇದು ನನ್ನ ಸನ್ನಿಧಿಯಲ್ಲಿ ನಡೆಯಲಿರುವ ವಿಚಾರಣೆಯ ಭಯ ವಿರಿಸಿಕೊಂಡವನಿಗೆ ಹಾಗೂ ನನ್ನ ಎಚ್ಚರಿಕೆಗೆ ಹೆದರುವವನಿಗೆ ಇರುವ ಬಹುಮಾನ."

وَلَنُسْكِنَنَّكُمُ الْأَرْضَ مِن بَعْدِهِمْ ۚ
ذَٰلِكَ لِمَنْ خَافَ مَقَامِي وَخَافَ وَعِيدِ ﴿١٤﴾

15. ಅವರು ತೀರ್ಮಾನ ಬಯಸಿದ್ದರು. (ಅವರ ತೀರ್ಮಾನ ಹೀಗಾಯಿತು). ಪ್ರತಿಯೊಬ್ಬ ಮದೋನ್ಮತ್ತ ಸತ್ಯನಿಷೇಧಿಯು ಶಿಕ್ಷಿಸಲ್ಪಟ್ಟನು.

وَاسْتَفْتَحُوا وَخَابَ كُلُّ جَبَّارٍ عَنِيدٍ ﴿١٥﴾

16. ಇದರ ನಂತರ ಮುಂದೆ ಅವನಿಗೆ 'ನರಕ' ಇದೆ. ಅಲ್ಲಿ ಅವನಿಗೆ ಕೀವು ಮಿಶ್ರಿತ ರಕ್ತದಂತಹ ನೀರನ್ನು ಕುಡಿಯಲು ಕೊಡ ಲಾಗುವುದು.

مِّن وَرَائِهِ جَهَنَّمُ وَيُسْقَىٰ مِن
مَّاءٍ صَدِيدٍ ﴿١٦﴾

17. ಅದನ್ನು ಅವನು ಬಹಳ ಪ್ರಯಾಸ ಪೂರ್ವಕ ಗಂಟಲಿನಿಂದ ಇಳಿಸಲು ಪ್ರಯತ್ನಿಸುವನು ಮತ್ತು ಅತ್ಯಂತ ಕಷ್ಟದಿಂದಲೇ ಇಳಿಸಬಲ್ಲನು. ಮೃತ್ಯು ಎಲ್ಲ ಕಡೆಗಳಿಂದಲೂ ಅವನನ್ನು ಆವರಿಸಿರುವುದು. ಆದರೆ ಅವನು ಸಾಯಲಾರ. ಮುಂದೆ ಒಂದು ಘೋರ ಯಾತನೆಯು ಅವನಿಗೆ ಪ್ರಾಣಕಂಟಕವಾಗಿರುವುದು.

يَتَجَرَّعُهُ وَلَا يَكَادُ يُسِيغُهُ وَيَأْتِيهِ
الْمَوْتُ مِن كُلِّ مَكَانٍ وَمَا هُوَ
بِمَيِّتٍ ۖ وَمِن وَرَائِهِ عَذَابٌ غَلِيظٌ ﴿١٧﴾

18. ತಮ್ಮ ಪ್ರಭುವನ್ನು ನಿಷೇಧಿಸಿದವರ ಕರ್ಮಗಳ ಉದಾಹರಣೆಯು ಒಂದು ಬಿರುಗಾಳಿಯ ದಿನದ ಚಂಡಮಾರುತವು ಹಾರಿಸಿದ ಬೂದಿಯಂತಿದೆ. ಅವರು ತಮ್ಮ ಗಳಿಕೆಗೆ ಯಾವ ಪ್ರತಿಫಲವನ್ನೂ ಪಡೆಯಲಾರರು. ಇದೇ ಪ್ರಥಮ ದರ್ಜೆಯ ಪಥಭ್ರಷ್ಟತೆ.

مَّثَلُ الَّذِينَ كَفَرُوا بِرَبِّهِمْ ۖ أَعْمَالُهُمْ
كَرَمَادٍ اشْتَدَّتْ بِهِ الرِّيحُ فِي يَوْمٍ
عَاصِفٍ ۖ لَّا يَقْدِرُونَ مِمَّا كَسَبُوا عَلَىٰ
شَيْءٍ ۚ ذَٰلِكَ هُوَ الضَّلَالُ الْبَعِيدُ ﴿١٨﴾

6. ಪ್ರವಾದಿಗಳು ತಮ್ಮ ಪ್ರವಾದಿತ್ವಕ್ಕೆ ಮೊದಲು ಪಥಭ್ರಷ್ಟ ಸಮುದಾಯದ ಅನುಯಾಯಿಯಾಗಿದ್ದರು ಎಂದು ಇದರ ಅರ್ಥವಲ್ಲ. ಪ್ರವಾದಿತ್ವಕ್ಕೆ ಮೊದಲು ಅವರು ಒಂದು ರೀತಿಯ ಮೌನ ಜೀವನ ನಡೆಸುತ್ತಿದ್ದರು. ಯಾವುದೇ ಧರ್ಮದ ಪ್ರಚಾರವನ್ನು ಅವರು ನಡೆಸುತ್ತಿರಲಿಲ್ಲ. ಹಾಗೆಯೇ ಪ್ರಚಲಿತವಿದ್ದ ಯಾವುದೇ ಧರ್ಮವನ್ನು ಅವರು ನಿರಾಕರಿಸುತ್ತಲೂ ಇರಲಿಲ್ಲ. ಆದ್ದರಿಂದ ಅವರ ಜನಾಂಗ ಅವರನ್ನು ನಮ್ಮ ಪೈಕಿಯವನೇ ಆದ ಒಬ್ಬನೆಂದು ಭಾವಿಸುತ್ತಿದ್ದರು. ಪ್ರವಾದಿತ್ವದ ಕೆಲಸವನ್ನು ಆರಂಭಿಸುತ್ತಲೇ, ಪೂರ್ವಜರ ಸಮುದಾಯದಿಂದ ಹೊರಹೋದರೆಂಬ ಆರೋಪವನ್ನು ಅವರ ಮೇಲೆ ಹೊರಿಸಲಾಗುತ್ತಿತ್ತು. ವಾಸ್ತವದಲ್ಲಿ ಪ್ರವಾದಿತ್ವಕ್ಕೆ ಮೊದಲೂ ಅವರೆಂದೂ ಬಹುದೇವಾರಾಧಕರ ಜನಾಂಗದಲ್ಲಿ ಸೇರಿರಲಿಲ್ಲ. ಆದ್ದರಿಂದ ಅವರು ಅದರಿಂದ ಹೊರನಡೆದಿರುವ ಆರೋಪ ಹೊರಿಸುವುದು ಅರ್ಥಹೀನವಾಗಿದೆ ಎಂಬುದು ಇದರ ಅರ್ಥ.

19. ಅಲ್ಲಾಹನು ಭೂಮಿ-ಆಕಾಶಗಳ ಸೃಷ್ಟಿಯನ್ನು ಸತ್ಯಪೂರ್ಣವಾಗಿ ನೆಲೆ ನಿಲ್ಲಿಸಿರುವುದನ್ನು ನೀವು ಕಾಣುವುದಿಲ್ಲವೇ? ಅವನು ಇಚ್ಛಿಸಿದರೆ ನಿಮ್ಮನ್ನು ಅಳಿಸಿ ಒಂದು ಹೊಸ ಸೃಷ್ಟಿಯನ್ನು ನಿಮ್ಮ ಸ್ಥಾನದಲ್ಲಿ ತರಬಲ್ಲನು.

أَلَمْ تَرَ أَنَّ اللَّهَ خَلَقَ السَّمٰوٰتِ وَالْأَرْضَ
بِالْحَقِّ ۚ إِنْ يَشَأْ يُذْهِبْكُمْ وَيَأْتِ
بِخَلْقٍ جَدِيدٍ ﴿١٩﴾

20. ಹೀಗೆ ಮಾಡಲು ಅವನಿಗೇನೂ ಪ್ರಯಾಸವಿಲ್ಲ.

وَمَا ذٰلِكَ عَلَى اللَّهِ بِعَزِيزٍ ﴿٢٠﴾

21. ಇವರೆಲ್ಲರೂ ಒಟ್ಟಾಗಿ ಅಲ್ಲಾಹನ ಮುಂದೆ ಪ್ರತ್ಯಕ್ಷರಾಗುವಾಗ ಈ ಲೋಕದಲ್ಲಿ ಅಶಕ್ತರಾಗಿದ್ದವರು ಅಹಂಭಾವಿಗಳಾಗಿದ್ದವರೊಡನೆ, "ಭೂಲೋಕದಲ್ಲಿ ನಾವು ನಿಮಗೆ ಅಧೀನರಾಗಿದ್ದೆವು. ಈಗ ನೀವು ನಮ್ಮನ್ನು ಅಲ್ಲಾಹನ ಶಿಕ್ಷೆಯಿಂದ ರಕ್ಷಿಸಲಿಕ್ಕಾಗಿಯೂ ಏನಾದರೂ ಮಾಡಬಲ್ಲಿರಾ?" ಎಂದು ಕೇಳುವರು. (ಅದಕ್ಕೆ) ಅವರು (ಹೀಗೆ) ಉತ್ತರ ಕೊಡುವರು: "ಅಲ್ಲಾಹ್ ನಮಗೆ ಮೋಕ್ಷದ ದಾರಿಯನ್ನು ತೋರಿಸಿ ಕೊಡುತ್ತಿದ್ದರೆ ನಾವು ನಿಮಗೂ ಅದನ್ನು ಖಂಡಿತ ತೋರಿಸಿ ಕೊಡುತ್ತಿದ್ದೆವು. ಈಗ ನಾವು ಪ್ರಲಾಪಿಸಿದರೂ ಸಹಿಸಿಕೊಂಡರೂ (ಪರಿಣಾಮ) ಒಂದೇ. ಹೇಗಿದ್ದರೂ ನಮಗೆ ರಕ್ಷಣೆಯ ಯಾವ ದಾರಿಯೂ ಇಲ್ಲ."

وَبَرَزُوا لِلَّهِ جَمِيعًا فَقَالَ الضُّعَفٰٓؤُا
لِلَّذِينَ اسْتَكْبَرُوٓا إِنَّا كُنَّا لَكُمْ تَبَعًا فَهَلْ
أَنْتُمْ مُغْنُونَ عَنَّا مِنْ عَذَابِ اللَّهِ مِنْ
شَيْءٍ ۚ قَالُوا لَوْ هَدٰىنَا اللَّهُ لَهَدَيْنٰكُمْ ۖ
سَوَآءٌ عَلَيْنَآ أَجَزِعْنَآ أَمْ صَبَرْنَا مَا
لَنَا مِنْ مَحِيصٍ ﴿٢١﴾

22. ತೀರ್ಮಾನ ಆಗಿ ಬಿಟ್ಟಾಗ ಶೈತಾನ್(ಹೀಗೆ) ಹೇಳುವನು: "ವಾಸ್ತವದಲ್ಲಿ ಅಲ್ಲಾಹನು ನಿಮಗೆ ನೀಡಿದ್ದ ವಾಗ್ದಾನಗಳೆಲ್ಲ ಸತ್ಯ ವಾಗಿದ್ದುವು ಮತ್ತು ನಾನು ನಿಮಗೆ ಮಾಡಿದ್ದ ವಾಗ್ದಾನಗಳ ಪೈಕಿ ಒಂದನ್ನೂ ನೆರವೇರಿಸಲಿಲ್ಲ. ನಿಮ್ಮ ಮೇಲೆ ನನ್ನ ಬಲ ಪ್ರಯೋಗವೇನೂ ಇರಲಿಲ್ಲ. ನಾನು ನಿಮ್ಮನ್ನು ನನ್ನ ಮಾರ್ಗದ ಕಡೆಗೆ ಕರೆ ನೀಡಿದ್ದುದೇ ವಿನಾ ಇನ್ನೇನೂ ಮಾಡಲಿಲ್ಲ. ನೀವು ನನ್ನ ಕರೆಗೆ ಓಗೊಟ್ಟಿರಿ. ಈಗ ನನ್ನನ್ನು ಹಳಿಯಬೇಡಿರಿ; ನಿಮ್ಮನ್ನೇ ನೀವು ಹಳಿದುಕೊಳ್ಳಿರಿ. ಇಲ್ಲಿ ನಿಮ್ಮ ದುಃಖವನ್ನು ನಾನು ನಿವಾರಿಸಲಾರೆ ಮತ್ತು ನನ್ನ ದುಃಖವನ್ನು ನೀವೂ ನಿವಾರಿಸಲಾರಿರಿ. ಈ ಮೊದಲು ನೀವು ನನ್ನನ್ನು ದೇವತ್ವದಲ್ಲಿ ಭಾಗೀದಾರನನ್ನಾಗಿ ಮಾಡಿದ್ದರೆ[7] ನಾನು ಅದರಿಂದ ಹೊಣೆ ವಿಮುಕ್ತನಾಗಿದ್ದೇನೆ. ಇಂತಹ ಅಕ್ರಮಿಗಳಿಗೆ ವೇದನಾಯುಕ್ತ ಶಿಕ್ಷೆಯಿರುವುದು ಖಂಡಿತ."

وَقَالَ الشَّيْطٰنُ لَمَّا قُضِيَ الْأَمْرُ إِنَّ اللَّهَ
وَعَدَكُمْ وَعْدَ الْحَقِّ وَوَعَدْتُّكُمْ فَأَخْلَفْتُكُمْ ۖ
وَمَا كَانَ لِيَ عَلَيْكُمْ مِنْ سُلْطٰنٍ إِلَّآ أَنْ
دَعَوْتُكُمْ فَاسْتَجَبْتُمْ لِي ۖ فَلَا تَلُومُونِي
وَلُومُوٓا أَنْفُسَكُمْ ۖ مَآ أَنَا بِمُصْرِخِكُمْ
وَمَآ أَنْتُمْ بِمُصْرِخِيَّ ۖ إِنِّي كَفَرْتُ بِمَآ
أَشْرَكْتُمُونِ مِنْ قَبْلُ ۗ إِنَّ الظّٰلِمِينَ
لَهُمْ عَذَابٌ أَلِيمٌ ﴿٢٢﴾

7. ವಿಶ್ವಾಸಾತ್ಮಕವಾಗಿ ಶೈತಾನನನ್ನು ಯಾರೂ ದೇವತ್ವದಲ್ಲಿ ಸಹಭಾಗಿಯಾಗಿ ಮಾಡುವುದಿಲ್ಲ ಮತ್ತು ಅದರ ಉಪಾಸನೆ ಮಾಡುವುದಿಲ್ಲ ಎಂಬುದು ಸರ್ವವಿಧಿತ. ಎಲ್ಲರೂ ಅದನ್ನು ಶಪಿಸುತ್ತಾರೆ. ಆದರೆ ಅದರ ಅನುಸರಣೆ, ದಾಸ್ಯ ಮತ್ತು ಅಂಧ ಅಥವಾ ಉದ್ದೇಶ ಪೂರ್ವಕವಾದ ಅನುಕರಣೆಯನ್ನು ಮಾಡಲಾಗುತ್ತದೆ. ಅದನ್ನೇ ಇಲ್ಲಿ 'ಬಹುದೇವಾರಾಧನೆ' ಎಂದು ಕರೆಯಲಾಗಿದೆ.

23. ಇದಕ್ಕೆ ವ್ಯತಿರಿಕ್ತವಾಗಿ ಸತ್ಯವಿಶ್ವಾಸ ಸ್ವೀಕರಿಸಿದವರೂ ಸತ್ಕರ್ಮವೆಸಗಿದವರೂ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶಗೊಳಿಸಲ್ಪಡುವರು. ಅಲ್ಲಿ ಅವರು ತಮ್ಮ ಪ್ರಭುವಿನ ಅನುಜ್ಞೆಯಿಂದ ಸದಾ ವಾಸಿಸುತ್ತಿರುವರು. ಅಲ್ಲಿ ಅವರನ್ನು ಶಾಂತಿಯ ಶುಭಾಶಯಗಳೊಂದಿಗೆ ಸ್ವಾಗತಿಸಲಾಗುವುದು.

وَأُدْخِلَ الَّذِينَ آمَنُوا وَعَمِلُوا الصَّالِحَاتِ
جَنَّاتٍ تَجْرِي مِنْ تَحْتِهَا الْأَنْهَارُ خَالِدِينَ
فِيهَا بِإِذْنِ رَبِّهِمْ ۖ تَحِيَّتُهُمْ فِيهَا سَلَامٌ ﴿٢٣﴾

24. ಅಲ್ಲಾಹನು 'ಪವಿತ್ರ ವಚನ'ವನ್ನು ಯಾವುದಕ್ಕೆ ಹೋಲಿಸಿರುತ್ತಾನೆಂದು ನೀವು ನೋಡುತ್ತಿಲ್ಲವೇ? ಅದರ ಉಪಮೆ ಹೀಗಿದೆ: ಒಂದು ಉತ್ತಮ ಜಾತಿಯ ಮರ. ಅದರ ಬೇರುಗಳು ನೆಲದೊಳಗೆ ಆಳಕ್ಕೆ ಸ್ಥಿರವಾಗಿ ನಾಟಿವೆ. ಗೆಲ್ಲುಗಳು ಆಕಾಶಕ್ಕೆ ಮುಟ್ಟಿವೆ.

أَلَمْ تَرَ كَيْفَ ضَرَبَ اللَّهُ مَثَلًا كَلِمَةً
طَيِّبَةً كَشَجَرَةٍ طَيِّبَةٍ أَصْلُهَا ثَابِتٌ
وَفَرْعُهَا فِي السَّمَاءِ ﴿٢٤﴾

25. ಅದು ಸದಾಕಾಲವೂ ತನ್ನ ಪ್ರಭುವಿನ ಅನುಜ್ಞೆಯಿಂದ ತನ್ನ ಫಲಗಳನ್ನು ಕೊಡುತ್ತಿದೆ. ಜನರು ಇವುಗಳಿಂದ ಪಾಠ ಕಲಿಯಲೆಂದು ಅಲ್ಲಾಹನು ಈ ಉದಾಹರಣೆಗಳನ್ನು ಕೊಡುತ್ತಾನೆ.

تُؤْتِي أُكُلَهَا كُلَّ حِينٍ بِإِذْنِ رَبِّهَا ۗ وَ
يَضْرِبُ اللَّهُ الْأَمْثَالَ لِلنَّاسِ لَعَلَّهُمْ يَتَذَكَّرُونَ ﴿٢٥﴾

26. 'ಪೈಶಾಚಿಕ ವಚನ'ದ ಉಪಮೆ - ಒಂದು ಕೆಟ್ಟ ಜಾತಿಯ ಮರದಂತಿದೆ. ಅದು ಭೂಮಿಯ ಮೇಲ್ಭಾಗದಿಂದ ಕಿತ್ತೆಸೆಯಲ್ಪಡುತ್ತದೆ. ಅದಕ್ಕೆ ಸ್ಥಿರತೆಯೆಂಬುದೇ ಇಲ್ಲ.

وَمَثَلُ كَلِمَةٍ خَبِيثَةٍ كَشَجَرَةٍ خَبِيثَةٍ اجْتُثَّتْ
مِنْ فَوْقِ الْأَرْضِ مَا لَهَا مِنْ قَرَارٍ ﴿٢٦﴾

27. ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಒಂದು ಸ್ಥಿರ ವಚನದ ಆಧಾರದಲ್ಲಿ ಇಹ-ಪರಗಳೆರಡರಲ್ಲೂ ಭದ್ರತೆ ದಯಪಾಲಿಸುತ್ತಾನೆ ಮತ್ತು ಅಕ್ರಮಿಗಳನ್ನು ಅಲ್ಲಾಹನು ದಾರಿಗೆಡಿಸುತ್ತಾನೆ. ತನಗಿಷ್ಟ ಬಂದಂತೆ ಮಾಡುವ ಅಧಿಕಾರ ಅಲ್ಲಾಹನಿಗಿದೆ.

يُثَبِّتُ اللَّهُ الَّذِينَ آمَنُوا بِالْقَوْلِ الثَّابِتِ
فِي الْحَيَاةِ الدُّنْيَا وَفِي الْآخِرَةِ ۖ وَيُضِلُّ
اللَّهُ الظَّالِمِينَ ۚ وَيَفْعَلُ اللَّهُ مَا يَشَاءُ ﴿٢٧﴾

28. ಅಲ್ಲಾಹನಿಂದ 'ಕೊಡುಗೆ'ಯನ್ನು ಪಡೆದು ಅದನ್ನು ಕೃತಘ್ನತೆಯನ್ನಾಗಿ ಬದಲಾಯಿಸಿ, (ತಮ್ಮೊಂದಿಗೆ) ತಮ್ಮ ಜನಾಂಗವನ್ನೂ ವಿನಾಶಗೃಹದೊಳಕ್ಕೆ ತಳ್ಳಿಬಿಟ್ಟವರನ್ನು ನೀವು ಕಂಡಿರಾ?

أَلَمْ تَرَ إِلَى الَّذِينَ بَدَّلُوا نِعْمَتَ اللَّهِ
كُفْرًا وَأَحَلُّوا قَوْمَهُمْ دَارَ الْبَوَارِ ﴿٢٨﴾

29. ಅರ್ಥಾತ್ ಜಹನ್ನಮ್‌ನೊಳಗೆ (ನರಕದೊಳಗೆ), ಅದರಲ್ಲಿ ಅವರು ಕರಟಿ ಹೋಗುವರು. ಅದು ಅತ್ಯಂತ ನಿಕೃಷ್ಟ ತಾಣ.

جَهَنَّمَ يَصْلَوْنَهَا ۖ وَبِئْسَ الْقَرَارُ ﴿٢٩﴾

30. ಅಲ್ಲಾಹನ ಮಾರ್ಗದಿಂದ ತಮ್ಮನ್ನು ತಪ್ಪಿಸಲಿಕ್ಕಾಗಿ ಅವರು ಅಲ್ಲಾಹನಿಗೆ ಕೆಲವು ಭಾಗೀದಾರರನ್ನು ಮಾಡಿಕೊಂಡರು. ಅವರೊಡನೆ, "ಈಗ ನೀವು ಸುಖ ಪಟ್ಟು ಕೊಳ್ಳಿರಿ. ಕೊನೆಗೆ ನಿಮಗೆ ನರಕಕ್ಕೆ ಮರಳಿ ಹೋಗಬೇಕಾಗಿದೆ" ಎಂದು ಹೇಳಿರಿ.

وَجَعَلُوا لِلَّهِ أَنْدَادًا لِيُضِلُّوا عَنْ سَبِيلِهِ ۗ
قُلْ تَمَتَّعُوا فَإِنَّ مَصِيرَكُمْ إِلَى النَّارِ ﴿٣٠﴾

31. ಓ ಪೈಗಂಬರರೇ, ಸತ್ಯವಿಶ್ವಾಸವನ್ನು ಸ್ವೀಕರಿಸಿದ ನನ್ನ ದಾಸರೊಡನೆ ನಮಾಝನ್ನು ಸಂಸ್ಥಾಪಿಸಲಿಕ್ಕೂ ಲೇವಾದೇವಿಗಳೂ ಸ್ನೇಹಾಚಾರಗಳೂ ಇರಲಾರದ ಆ ದಿನ ಬರುವುದಕ್ಕೆ ಮುಂಚೆಯೇ ನಾವು ಅವರಿಗೆ ಏನನ್ನೆಲ್ಲ ದಯಪಾಲಿಸಿರುತ್ತೇವೋ ಅದರಿಂದ ರಹಸ್ಯವಾಗಿಯೂ ಬಹಿರಂಗವಾಗಿಯೂ (ಸತ್ಕಾರ್ಯಗಳಲ್ಲಿ) ಖರ್ಚು ಮಾಡಲಿಕ್ಕೂ ಹೇಳಿಬಿಡಿರಿ.

قُلْ لِّعِبَادِيَ الَّذِيْنَ اٰمَنُوْا يُقِيْمُوا الصَّلٰوةَ وَيُنْفِقُوْا مِمَّا رَزَقْنٰهُمْ سِرًّا وَّعَلَانِيَةً مِّنْ قَبْلِ اَنْ يَّاْتِيَ يَوْمٌ لَّا بَيْعٌ فِيْهِ وَلَا خِلٰلٌ ﴿٣١﴾

32. ಭೂಮಿ-ಆಕಾಶಗಳನ್ನು ಸೃಷ್ಟಿಸಿದವನೂ ಆಕಾಶದಿಂದ ಮಳೆ ಸುರಿಸಿದವನೂ ಅದರ ಮೂಲಕ ನಿಮಗೆ ಆಹಾರವನ್ನೊದಗಿಸಲಿಕ್ಕಾಗಿ ತರತರದ ಫಲಗಳನ್ನು ಉತ್ಪಾದಿಸಿದವನೂ ಅಲ್ಲಾಹನೇ ಆಗಿರುತ್ತಾನೆ. ಅವನು ತನ್ನ ಆಜ್ಞೆ ಪ್ರಕಾರ ಸಮುದ್ರದಲ್ಲಿ ಸಂಚರಿಸುವಂತೆ ಹಡಗನ್ನು ನಿಮ್ಮ ನಿಯಂತ್ರಣಕ್ಕೆ ಕೊಟ್ಟನು ಮತ್ತು ನಿಮಗಾಗಿ ನದಿಗಳನ್ನೂ ನಿಯಂತ್ರಿಸಿದನು.

اَللّٰهُ الَّذِيْ خَلَقَ السَّمٰوٰتِ وَالْاَرْضَ وَاَنْزَلَ مِنَ السَّمَآءِ مَآءً فَاَخْرَجَ بِهٖ مِنَ الثَّمَرٰتِ رِزْقًا لَّكُمْ ۚ وَسَخَّرَ لَكُمُ الْفُلْكَ لِتَجْرِيَ فِي الْبَحْرِ بِاَمْرِهٖ ۚ وَسَخَّرَ لَكُمُ الْاَنْهٰرَ ﴿٣٢﴾

33. ಅವನು ನಿರಂತರವಾಗಿ ಚಲಿಸುತ್ತಿರುವ ಸೂರ್ಯ ಚಂದ್ರರನ್ನು ನಿಮಗಾಗಿ ನಿಯಂತ್ರಿಸಿದನು ಮತ್ತು ರಾತ್ರೆ ಹಗಲುಗಳನ್ನು ನಿಮಗಾಗಿ ನಿಯಂತ್ರಿಸಿದನು.[8]

وَسَخَّرَ لَكُمُ الشَّمْسَ وَالْقَمَرَ دَآئِبَيْنِ ۚ وَسَخَّرَ لَكُمُ الَّيْلَ وَالنَّهَارَ ﴿٣٣﴾

34. ಅವನು ನೀವು ಬೇಡಿದುದನ್ನೆಲ್ಲ ನಿಮಗೆ ಕೊಟ್ಟನು.[9] ನೀವು ಅಲ್ಲಾಹನ 'ಕೊಡುಗೆ'ಗಳನ್ನು ಎಣಿಕೆ ಮಾಡಲಿಚ್ಛಿಸಿದರೆ ಮಾಡಲಾರಿರಿ. ವಾಸ್ತವದಲ್ಲಿ ಮಾನವನು ಮಹಾ ಅನ್ಯಾಯಿಯೂ ಕೃತಘ್ನನೂ ಆಗಿರುತ್ತಾನೆ.

وَاٰتٰىكُمْ مِّنْ كُلِّ مَا سَاَلْتُمُوْهُ ۗ وَاِنْ تَعُدُّوْا نِعْمَتَ اللّٰهِ لَا تُحْصُوْهَا ۗ اِنَّ الْاِنْسَانَ لَظَلُوْمٌ كَفَّارٌ ﴿٣٤﴾

35. ಇಬ್‌ರಾಹೀಮರು ಪ್ರಾರ್ಥಿಸಿದ ಸಂದರ್ಭವನ್ನು ನೆನೆಯಿರಿ. "ಓ ನನ್ನ ಪ್ರಭೂ, ಈ ಪಟ್ಟಣ(ಅರ್ಥಾತ್ ಮಕ್ಕಾ)ವನ್ನು ಶಾಂತಿ ನಗರವನ್ನಾಗಿ ಮಾಡು ಮತ್ತು ನನ್ನನ್ನೂ ನನ್ನ ಸಂತತಿಯನ್ನೂ ವಿಗ್ರಹಾರಾಧನೆಯಿಂದ ರಕ್ಷಿಸು.

وَاِذْ قَالَ اِبْرٰهِيْمُ رَبِّ اجْعَلْ هٰذَا الْبَلَدَ اٰمِنًا وَّاجْنُبْنِيْ وَبَنِيَّ اَنْ نَّعْبُدَ الْاَصْنَامَ ﴿٣٥﴾

8. 'ನಿಮಗಾಗಿ ನಿಯಂತ್ರಿಸಿದನು' ಎಂಬುದನ್ನು ಸಾಮಾನ್ಯವಾಗಿ 'ನಿಮ್ಮ ಅಧೀನಗೊಳಿಸಿದನು' ಎಂದು ತಪ್ಪಾಗಿ ಅರ್ಥೈಸಲಾಗುತ್ತದೆ. ಅನಂತರ ಇಂತಹ ವಿಷಯವನ್ನೊಳಗೊಂಡ ಸೂಕ್ತಗಳಿಗೆ ಚಿತ್ರವಿಚಿತ್ರ ಅರ್ಥಗಳನ್ನು ಕಲ್ಪಿಸಲಾಗುತ್ತದೆ. ಕೆಲವರು ಈ ಸೂಕ್ತಗಳ ಆಧಾರದಲ್ಲಿ ಭೂಮಿ-ಆಕಾಶಗಳನ್ನು ಅಧೀನಗೊಳಿಸುವುದೇ ಮಾನವನ ಜೀವನೋದ್ದೇಶ ಎಂದು ಹೇಳುವಷ್ಟು ಅತಿರೇಕಕ್ಕೂ ತಲಪಿದ್ದಾರೆ. ವಾಸ್ತವದಲ್ಲಿ ಇವುಗಳನ್ನು ನಿಯಂತ್ರಿಸುವುದು ಎಂದರೆ ಅಲ್ಲಾಹನು ಅವುಗಳನ್ನು ಮಾನವನಿಗೆ ಪ್ರಯೋಜನಕಾರಿಯಾದಂತಹ ನಿಯಮಗಳಿಗೆ ಬದ್ಧಗೊಳಿಸಿದ್ದಾನೆ ಎಂದಾಗಿದೆ.

9. ಅರ್ಥಾತ್- ನಿಸರ್ಗದತ್ತವಾದ ನಿಮ್ಮೆಲ್ಲಾ ಬೇಡಿಕೆಗಳನ್ನು ಈಡೇರಿಸಿದನು. ನಿಮ್ಮ ಜೀವನಕ್ಕೆ ಬೇಕಾದುದೆಲ್ಲವನ್ನೂ ಒದಗಿಸಿದನು. ನಿಮ್ಮ ಉಳಿವು ಮತ್ತು ಅಭಿವೃದ್ಧಿಗೆ ಬೇಕಾದ ಸಾಧನಾನು ಕೂಲತೆಗಳನ್ನೆಲ್ಲಾ ದಯಪಾಲಿಸಿದನು.

36. ಓ ನನ್ನ ಪ್ರಭೂ, ಈ ವಿಗ್ರಹಗಳು ಅನೇಕರನ್ನು ದಾರಿಗೆಡಿಸಿವೆ. (ಇವು ನನ್ನ ಸಂತತಿಯನ್ನೂ ಪಥಭ್ರಷ್ಟಗೊಳಿಸಿಬಿಡಲೂ ಬಹುದು. ಆದುದರಿಂದ ಅವರ ಪೈಕಿ) ನನ್ನ ಪದ್ಧತಿಯಲ್ಲಿ ನಡೆಯುವವನು ನನ್ನವನು ಮತ್ತು ಯಾರಾದರೂ ನನ್ನದಕ್ಕೆ ವಿರುದ್ಧವಾದ ರೀತಿಯಲ್ಲಿ ನಡೆದರೆ, ನಿಶ್ಚಯವಾಗಿಯೂ ನೀನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಿ.

رَبِّ إِنَّهُنَّ أَضْلَلْنَ كَثِيرًا مِّنَ النَّاسِ ۖ
فَمَن تَبِعَنِي فَإِنَّهُ مِنِّي ۖ وَمَنْ عَصَانِي فَإِنَّكَ
غَفُورٌ رَّحِيمٌ ﴿٣٦﴾

37. ಓ ನನ್ನ ಪ್ರಭೂ, ನಾನು ನನ್ನ ಸಂತತಿಯ ಒಂದು ಭಾಗವನ್ನು ಒಂದು ಬಂಜರು ಕಣಿವೆಯಲ್ಲಿ ನಿನ್ನ ಸನ್ಮಾನ್ಯ ಗೃಹದ ಬಳಿ ತಂದು ನೆಲೆಗೊಳಿಸಿದ್ದೇನೆ. ಓ ನನ್ನ ಪ್ರಭೂ, ಇವರು ನಮಾಝನ್ನು ಸಂಸ್ಥಾಪಿಸಲೆಂದು ಹೀಗೆ ಮಾಡಿದ್ದೇನೆ. ಆದುದರಿಂದ ನೀನು ಜನಮನಗಳು ಇವರ ಕಡೆಗೆ ಒಲಿಯುವಂತೆ ಮಾಡು ಮತ್ತು ಇವರಿಗೆ ತಿನ್ನಲು ಫಲಗಳನ್ನು ನೀಡು. ಇವರು ಕೃತಜ್ಞರಾಗಲೂ ಬಹುದು.

رَّبَّنَا إِنِّي أَسْكَنتُ مِن ذُرِّيَّتِي بِوَادٍ غَيْرِ
ذِي زَرْعٍ عِندَ بَيْتِكَ الْمُحَرَّمِ رَبَّنَا
لِيُقِيمُوا الصَّلَاةَ فَاجْعَلْ أَفْئِدَةً مِّنَ
النَّاسِ تَهْوِي إِلَيْهِمْ وَارْزُقْهُم مِّنَ
الثَّمَرَاتِ لَعَلَّهُمْ يَشْكُرُونَ ﴿٣٧﴾

38. ಓ ನನ್ನ ಪ್ರಭೂ, ನಾವು ಅಡಗಿಸುವುದನ್ನೂ ಬಹಿರಂಗಪಡಿಸುವುದನ್ನೂ ನೀನು ಬಲ್ಲವನಾಗಿರುತ್ತಿ ಮತ್ತು ನಿಜಕ್ಕೂ ಆಕಾಶಗಳಲ್ಲಾಗಲಿ ಭೂಮಿಯಲ್ಲಾಗಲಿ ಅಲ್ಲಾಹನಿಂದ ಏನೊಂದೂ ಅಡಗಿರುವುದಿಲ್ಲ.

رَبَّنَا إِنَّكَ تَعْلَمُ مَا نُخْفِي وَمَا نُعْلِنُ ۗ
وَمَا يَخْفَىٰ عَلَى اللَّهِ مِن شَيْءٍ فِي
الْأَرْضِ وَلَا فِي السَّمَاءِ ﴿٣٨﴾

39. ಈ ವೃದ್ಧಾಪ್ಯದಲ್ಲಿ ನನಗೆ ಇಸ್ಮಾಈಲ್ ಮತ್ತು ಇಸ್‌ಹಾಕರಂತಹ ಪುತ್ರರನ್ನು ದಯಪಾಲಿಸಿದ ಅಲ್ಲಾಹನಿಗೆ ಕೃತಜ್ಞತೆ. ನಿಶ್ಚಯವಾಗಿಯೂ ನನ್ನ ಪ್ರಭು ಪ್ರಾರ್ಥನೆಯನ್ನು ಆಲಿಸುತ್ತಾನೆ.

الْحَمْدُ لِلَّهِ الَّذِي وَهَبَ لِي عَلَى الْكِبَرِ
إِسْمَاعِيلَ وَإِسْحَاقَ ۚ إِنَّ رَبِّي لَسَمِيعُ الدُّعَاءِ ﴿٣٩﴾

40. ಓ ನನ್ನ ಪ್ರಭೂ ನೀನು ನನ್ನನ್ನು ನಮಾಝ್ ಸಂಸ್ಥಾಪಿಸುವವನನ್ನಾಗಿ ಮಾಡು. ನನ್ನ ಸಂತತಿಯಿಂದಲೂ (ಈ ಕಾರ್ಯವೆಸಗುವವರನ್ನು ಎಬ್ಬಿಸು.) ಓ ನನ್ನ ಪ್ರಭೂ, ನನ್ನ ಪ್ರಾರ್ಥನೆಯನ್ನು ಸ್ವೀಕರಿಸು.

رَبِّ اجْعَلْنِي مُقِيمَ الصَّلَاةِ وَمِن
ذُرِّيَّتِي ۚ رَبَّنَا وَتَقَبَّلْ دُعَاءِ ﴿٤٠﴾

41. ಓ ನನ್ನ ಪ್ರಭೂ, ನನ್ನನ್ನೂ ನನ್ನ ಮಾತಾಪಿತರನ್ನೂ[10] ಸಕಲ ಸತ್ಯವಿಶ್ವಾಸಿಗಳನ್ನೂ ವಿಚಾರಣೆ ನಡೆಸಲ್ಪಡುವ ಆ ದಿನ ಕ್ಷಮಿಸಿಬಿಡು.

رَبَّنَا اغْفِرْ لِي وَلِوَالِدَيَّ وَلِلْمُؤْمِنِينَ
يَوْمَ يَقُومُ الْحِسَابُ ﴿٤١﴾

10. ಹ. ಇಬ್ರಾಹೀಮ್(ಅ) ತಮ್ಮ ದೇಶ ಬಿಟ್ಟು ಹೊರಡುವಾಗ ಮಾಡಿದ್ದ ವಾಗ್ದಾನದಂತೆ ಅವರು ತಮ್ಮ ತಂದೆಯನ್ನೂ ಕ್ಷಮೆಯ ಪ್ರಾರ್ಥನೆಯಲ್ಲಿ ಸೇರಿಸಿದ್ದರು. "ನಿಮಗೆ ಕ್ಷಮೆ ನೀಡಬೇಕೆಂದು ನಾನು ನನ್ನ ಪ್ರಭುವಿನೊಡನೆ ಪ್ರಾರ್ಥಿಸಿಕೊಳ್ಳುವೆನು." (ಸೂರಃ

42. ಈ ಅಕ್ರಮಿಗಳು ಮಾಡುತ್ತಿರುವುದರ ಬಗ್ಗೆ ಅಲ್ಲಾಹನು ಅಶ್ರದ್ಧನಾಗಿರುವನೆಂದು ನೀವು ಭಾವಿಸಬೇಡಿರಿ. ಅಲ್ಲಾಹ್ ಅವರಿಗೆ - ಕಣ್ಣುಗಳು ತೆರೆದೇ ಇರುವ ಆ ದಿನದ ವರೆಗೆ- ಕಾಲಾವಕಾಶ ನೀಡುತ್ತಿದ್ದಾನೆ.

وَلَا تَحْسَبَنَّ اللّٰهَ غَافِلًا عَمَّا يَعْمَلُ الظّٰلِمُوْنَ ۗ
اِنَّمَا يُؤَخِّرُهُمْ لِيَوْمٍ تَشْخَصُ فِيْهِ الْاَبْصَارُ ۙ ﴿٤٢﴾

43. ಅಂದು ಅವರು ತಲೆಯೆತ್ತಿಕೊಂಡು ಓಡುತ್ತಿರುವರು, ಅವರ ದೃಷ್ಟಿಗಳು ಮೇಲಕ್ಕೇ ನಾಟಿರುವುವು, ಹೃದಯಗಳು ಗಾಬರಿಗೊಂಡಿರುವುವು.

مُهْطِعِيْنَ مُقْنِعِيْ رُءُوْسِهِمْ لَا يَرْتَدُّ
اِلَيْهِمْ طَرْفُهُمْ ۚ وَاَفْـِٕدَتُهُمْ هَوَآءٌ ۗ ﴿٤٣﴾

44. ಓ ಪೈಗಂಬರರೇ, ಶಿಕ್ಷೆಯು ಬಂದೆರಗುವ ಆ ದಿವಸದ ಬಗ್ಗೆ ನೀವು ಜನರಿಗೆ ಎಚ್ಚರಿಕೆ ಕೊಡಿರಿ. ಆಗ ಈ ಅಕ್ರಮಿಗಳು, "ಓ ನಮ್ಮ ಪ್ರಭೂ, ನಮಗೆ ಇನ್ನೂ ಕೊಂಚ ಕಾಲಾವಕಾಶವನ್ನು ಕೊಟ್ಟು ಬಿಡು. ನಾವು ನಿನ್ನ ಕರೆಗೆ ಓಗೊಡುವೆವು ಮತ್ತು ಸಂದೇಶವಾಹಕರನ್ನು ಅನುಸರಿಸುವೆವು" ಎನ್ನುವರು. (ಆದರೆ ಅವರಿಗೆ ಹೀಗೆ ಉತ್ತರ ಕೊಡಲಾಗುವುದು:) "ನಮಗೆಂದೂ ಅವನತಿ ಬರಲಿಕ್ಕೇ ಇಲ್ಲವೆಂದು ಇದಕ್ಕೆ ಮುಂಚೆ ಆಣೆ ಹಾಕುತ್ತ ಹೇಳುತ್ತಿದ್ದವರು ನೀವೇ ಅಲ್ಲವೇ?

وَاَنْذِرِ النَّاسَ يَوْمَ يَاْتِيْهِمُ الْعَذَابُ
فَيَقُوْلُ الَّذِيْنَ ظَلَمُوْا رَبَّنَآ اَخِّرْنَآ
اِلٰٓى اَجَلٍ قَرِيْبٍ ۙ نُّجِبْ دَعْوَتَكَ وَنَتَّبِعِ
الرُّسُلَ ؕ اَوَلَمْ تَكُوْنُوْٓا اَقْسَمْتُمْ مِّنْ
قَبْلُ مَا لَكُمْ مِّنْ زَوَالٍ ۙ ﴿٤٤﴾

45. ವಸ್ತುತಃ ನೀವು ತಮ್ಮ ಮೇಲೆ ತಾವೇ ಅಕ್ರಮವೆಸಗಿದ್ದ ಆ ಜನಾಂಗಗಳ ನಾಡುಗಳಲ್ಲಿ ವಾಸಿಸಿದ್ದಿರಿ ಮತ್ತು ನಾವು ಅವರೊಂದಿಗೆ ಹೇಗೆ ವರ್ತಿಸಿದ್ದೇವೆಂಬುದನ್ನು ನೋಡಿರುತ್ತೀರಿ ಮತ್ತು ನಾವು ಅದರ ಉದಾಹರಣೆಗಳನ್ನು ಕೊಡುತ್ತ ನಿಮಗೆ ಬೋಧಿಸಿಯೂ ಇದ್ದೆವು.

وَّسَكَنْتُمْ فِيْ مَسٰكِنِ الَّذِيْنَ ظَلَمُوْٓا
اَنْفُسَهُمْ وَتَبَيَّنَ لَكُمْ كَيْفَ فَعَلْنَا بِهِمْ
وَضَرَبْنَا لَكُمُ الْاَمْثَالَ ﴿٤٥﴾

46. ಅವರು ತಮ್ಮ ಎಲ್ಲಾ ಕುತಂತ್ರಗಳನ್ನು ನಡೆಸಿ ನೋಡಿದರು. ಅವರ ಕುತಂತ್ರಗಳು ಪರ್ವತಗಳನ್ನೇ ಸರಿಸುವಷ್ಟು ಘೋರವಾಗಿದ್ದುವಾದರೂ ಅವರ ಪ್ರತಿಯೊಂದು ಕುತಂತ್ರದ ಪ್ರತಿ ಖಂಡನೆ ಅಲ್ಲಾಹನ ಬಳಿಯಲ್ಲಿತ್ತು."

وَقَدْ مَكَرُوْا مَكْرَهُمْ وَعِنْدَ اللّٰهِ
مَكْرُهُمْ ؕ وَاِنْ كَانَ مَكْرُهُمْ
لِتَزُوْلَ مِنْهُ الْجِبَالُ ﴿٤٦﴾

47. ಆದುದರಿಂದ ಓ ಪೈಗಂಬರರೇ ಎಂದಾದರೂ ಅಲ್ಲಾಹನು, ತನ್ನ ಸಂದೇಶವಾಹಕರೊಡನೆ ಮಾಡಿದ ವಾಗ್ದಾನಗಳಿಗೆ ವಿರುದ್ಧವಾಗಿ ವರ್ತಿಸುವನೆಂದು ಭಾವಿಸಬೇಡಿರಿ. ವಾಸ್ತವದಲ್ಲಿ ಅಲ್ಲಾಹನು ಮಹಾ ಪ್ರತಾಪಿಯೂ ಪ್ರತೀಕಾರ ಪಡೆಯುವವನೂ ಆಗಿರುತ್ತಾನೆ.

فَلَا تَحْسَبَنَّ اللّٰهَ مُخْلِفَ وَعْدِهٖ
رُسُلَهٗ ؕ اِنَّ اللّٰهَ عَزِيْزٌ ذُو انْتِقَامٍ ﴿٤٧﴾

ಮರ್ಯಮ್ 47ನೆಯ ಸೂಕ್ತ) ಎಂಬುದು ಆ ವಾಗ್ದಾನವಾಗಿತ್ತು. ಆದರೆ ಅವನಂತು ಅಲ್ಲಾಹನ ಶತ್ರುವಾಗಿದ್ದ ಎಂದು ತಿಳಿದ ಬಳಿಕ ಅವರು ಅದರಿಂದ ವಿಮುಖರಾದರು. (ಸೂರಃ ಅತ್ತೌಬಃದ 114ನೆಯ ಸೂಕ್ತ)

48. ಭೂಮಿ ಮತ್ತು ಆಕಾಶಗಳು ಬದಲಾಯಿಸಲ್ಪಟ್ಟು ಏನಕ್ಕೇನೋ ಮಾಡಲ್ಪಡುವ ಆ ದಿನದ[11] ಬಗ್ಗೆ ಹಾಗೂ ಏಕನೂ ಪ್ರಚಂಡನೂ ಆದ ಅಲ್ಲಾಹನ ಮುಂದೆ ಸರ್ವರೂ ಪ್ರತ್ಯಕ್ಷ ಹಾಜರಾಗಲಿರುವ ದಿನದ ಬಗ್ಗೆ ಅವರಿಗೆ ಎಚ್ಚರಿಕೆ ನೀಡಿರಿ.

يَوْمَ تُبَدَّلُ الْاَرْضُ غَيْرَ الْاَرْضِ وَالسَّمٰوٰتُ وَبَرَزُوْا لِلّٰهِ الْوَاحِدِ الْقَهَّارِ ﴿٤٨﴾

49. ಅಂದು ಅಪರಾಧಿಗಳು ಸಂಕೋಲೆಗಳಿಂದ ಬಿಗಿಯಲ್ಪಟ್ಟಿರುವುದನ್ನು ನೀವು ನೋಡುವಿರಿ.

وَتَرَى الْمُجْرِمِيْنَ يَوْمَئِذٍ مُّقَرَّنِيْنَ فِي الْاَصْفَادِ ﴿٤٩﴾

50. ಅವರು ಟಾರಿನ ಉಡುಪು ಧರಿಸಿರುವರು ಮತ್ತು ಅಗ್ನಿ ಜ್ವಾಲೆಗಳು ಅವರ ಮುಖಗಳ ಮೇಲೆ ಆವರಿಸುತ್ತಿರುವುವು.

سَرَابِيْلُهُمْ مِّنْ قَطِرَانٍ وَّتَغْشٰى وُجُوْهَهُمُ النَّارُ ﴿٥٠﴾

51. ಅಲ್ಲಾಹನು ಪ್ರತಿಯೊಂದು ಜೀವಿಗೂ ಅದರ ಕರ್ಮಫಲವನ್ನು ಕೊಡಲಿಕ್ಕಾಗಿ ಹೀಗಾಗುವುದು. ನಿಶ್ಚಯವಾಗಿಯೂ ಅಲ್ಲಾಹನು ವಿಚಾರಣೆ ನಡೆಸುವುದರಲ್ಲಿ ಅತಿ ಶೀಘ್ರನು.

لِيَجْزِيَ اللّٰهُ كُلَّ نَفْسٍ مَّا كَسَبَتْ ۗ اِنَّ اللّٰهَ سَرِيْعُ الْحِسَابِ ﴿٥١﴾

52. ಇದು ಸಕಲ ಮಾನವರಿಗೆ ಒಂದು ಸಂದೇಶ. ಅವರಿಗೆ ಇದರ ಮೂಲಕ ಎಚ್ಚರಿಕೆ ಕೊಡಲಿಕ್ಕಾಗಿಯೂ ವಾಸ್ತವದಲ್ಲಿ ದೇವನೊಬ್ಬನೇ ಎಂದು ಅವರು ತಿಳಿದುಕೊಳ್ಳಲಿಕ್ಕಾಗಿಯೂ ಬುದ್ಧಿಜೀವಿಗಳು ಎಚ್ಚರಗೊಳ್ಳಲೆಂದೂ ಇದು ಕಳುಹಿಸಲ್ಪಟ್ಟಿರುತ್ತದೆ.

هٰذَا بَلٰغٌ لِّلنَّاسِ وَلِيُنْذَرُوْا بِهٖ وَلِيَعْلَمُوْٓا اَنَّمَا هُوَ اِلٰهٌ وَّاحِدٌ وَّلِيَذَّكَّرَ اُولُوا الْاَلْبَابِ ﴿٥٢﴾ ع

---

11. ಈ ಸೂಕ್ತ ಮತ್ತು ಕುರ್‌ಆನಿನ ಇತರ ಸೂಚನೆಗಳಿಂದ ವ್ಯಕ್ತವಾಗುವುದೇನೆಂದರೆ ನಿರ್ಣಾಯಕ ದಿನದಂದು ಭೂಮಿ-ಆಕಾಶಗಳನ್ನು ಸಂಪೂರ್ಣ ನಾಶಪಡಿಸಿ ಬಿಡಲಾಗುವುದಿಲ್ಲ. ಆದರೆ ಪ್ರಚಲಿತ ಭೌತಿಕ ವ್ಯವಸ್ಥೆಯನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿಬಿಡಲಾಗುವುದು. ಅನಂತರ ಪ್ರಥಮ ಸೂರ್ (ಅರ್ಥಾತ್ ಕಹಳೆ) ಮತ್ತು ಕೊನೆಯ ಕಹಳೆಯ ನಡುವೆ ನಿರ್ದಿಷ್ಟ ಅಂತರದ ವೇಳೆ ಭೂಮಿ-ಆಕಾಶಗಳ ಈಗಿನ ಸ್ವರೂಪವನ್ನು ಬದಲಿಸಲಾಗುವುದು. ಬೇರೆಯೇ ನೈಸರ್ಗಿಕ ನಿಯಮಗಳೊಂದಿಗೆ ಭಿನ್ನ ವ್ಯವಸ್ಥೆಯನ್ನು ರೂಪಿಸಲಾಗುವುದು. ಎರಡು 'ಕಹಳೆ'ಗಳ ನಡುವಿನ ಅಂತರ ಎಷ್ಟಿರುತ್ತದೆ ಎಂಬುದನ್ನು ಅಲ್ಲಾಹನೇ ಬಲ್ಲ. ಅದುವೇ ಪರಲೋಕವಾಗಿರುವುದು. ಅನಂತರ ಕೊನೆಯ 'ಕಹಳೆ' ಊದುತ್ತಲೇ ಆದಮ್‌ರ(ಅ) ಸೃಷ್ಟಿಯಿಂದ ಹಿಡಿದು ಪ್ರಳಯಕಾಲದ ತನಕ ಹುಟ್ಟಿದವರೆಲ್ಲರನ್ನೂ ಮತ್ತೊಮ್ಮೆ ಜೀವಂತಗೊಳಿಸಲಾಗುವುದು. ಅವರೆಲ್ಲರೂ ಅಲ್ಲಾಹನ ಮುಂದೆ ಹಾಜರುಗೊಳಿಸಲ್ಪಡುವರು. ಕುರ್‌ಆನ್ ಈ ಲೋಕವನ್ನು 'ಹಶರ್' ಎಂದು ಕರೆದಿದೆ. ಅದರ ಶಬ್ದಾರ್ಥ ಒಟ್ಟು ಸೇರಿಸುವುದು ಎಂದಾಗಿದೆ.